

ಬರ್ತ್‌ಡೇ ಮಾಡಿದ್ದೆ. ಆದರೆ ಕೇಕ್ ತಂದು, ಪಟಾಕಿ ಹಚ್ಚಿದರೆ ಅವಳು ಖಂಡಿತಾ ಬೈತಾಳೆ ಅಂತ ಗೊತ್ತಿತ್ತು. ಹಾಗಾಗಿ ರಾತ್ರಿ ಊಟವಾದ ಮೇಲೆ ಕೋಣೆಯ ತುಂಬಾ ಹಣತೆಯನ್ನು ಹಚ್ಚಿಟ್ಟು ಸಿಂಗರಿಸಿದೆವು. ಎಲ್ಲರ ಊಟವಾದ ಮೇಲೆ ಇದ್ದಕ್ಕಿದ್ದಂತೆಯೇ ಮನೆಯ ಮೇನ್ ಸ್ವಿಚ್ ಆಫ್ ಮಾಡಿದೆವು. ಟೀವಿ ನೋಡುತ್ತಿದ್ದ ಅಮ್ಮನನ್ನು ಕೋಣೆಯೊಳಗೆ ಕರೆದೊಯ್ದಾಗ, ಅಮ್ಮನ ಕಣ್ಣಲ್ಲಿ ದೀಪಾವಳಿ. ನೋಡಮ್ಮಾ, ಹ್ಯಾಪಿ ಮದರ್ಸ್ ಡೇ. ನಿನ್ನ ಬರ್ತ್‌ಡೇ ಬರುವ ಕಾರ್ತೀಕ ಮಾಸ ನಮ್ಮನೆಗೇ ಬಂದಿದೆ... ಎನ್ನುತ್ತಾ ನಾನು, ನನ್ನ ಹೆಂಡತಿ, ಮಗ ಎಲ್ಲರೂ ಸೇರಿ ಹಾಡು ಹೇಳಿದೆವು. 'ಮಾಡೋಕೆ ಬೇರೆ ಕೆಲಸ ಇಲ್ಲ ನಿಮ್ಗೆ...' ಎಂದು ಗೊಣಗುತ್ತಲೇ ಅಮ್ಮ ಕಣ್ಣೊರೆಸಿಕೊಂಡಳು. ಆಮೇಲೆ ದೇವರ ಪಟಕ್ಕೆ ದೀಪ ಹಚ್ಚಿ, ಅಲ್ಲಿದ್ದ ಸಿಹಿಯನ್ನು ಎಲ್ಲರಿಗೂ ಹಂಚಿದಳು. ಈಗಲೂ ಅಮ್ಮಂದಿರ ದಿನ ಎನ್ನುವುದು ಸುರೇಶನಿಗೆ ತನ್ನಮ್ಮನ ಹುಟ್ಟಿದ ಹಬ್ಬವೇ.

ಪರಿಶ್ರಮ್‌ಗೆ ಮದರ್ಸ್ ಡೇ ಎನ್ನುವುದು ಮರೆಯಲಾಗದ ದಿನ. ಅಂದು ಇಡೀ ದಿನ ಆತ ಫೋನ್ ಆಫ್ ಮಾಡಿ ಮನೆಯಲ್ಲಿಯೇ ಇರುತ್ತಾನೆ. ಅಡುಗೆಮನೆಯಲ್ಲಿ ಕಟ್ಟೆಯ ಮೇಲೆ ಅಸಡ್ಡಾಳವಾಗಿ ಕಾಲು ಬಿಸಾಡಿ ಕುಳಿತುಕೊಂಡು ಅಮ್ಮ ಹೇಳಿದ ಮಾತೆಲ್ಲ ಕೇಳುತ್ತಾನಂತೆ. 'ನಾನೇನೂ ಮದರ್ಸ್ ಡೇ ಅಂತೆಲ್ಲ ಅಮ್ಮನಿಗೆ ಹೇಳಿಲ್ಲ. ಆದರೆ ಫೋನ್ ಆಫ್ ಮಾಡಿ ಸುಮ್ಮನೇ ಕುಳಿತರೆ ಸಾಕು, ಹೇಳಿಕೊಳ್ಳಲು ಅಮ್ಮನ ಬಳಿ ಎಷ್ಟು ಕತೆಗಳಿರುತ್ತವೆ. ಮೊನ್ನೆ ಬಂದ ನೆಂಟರ ಕತೆ, ಕಾಲುನೋವಿಗೆ ನೋನಿ ಎಣ್ಣೆ ಹಚ್ಚಿದರೆ ಹೇಗೆ ಎಂಬ ವಿಚಾರ, ಬೆಳಿಗ್ಗೆ ಟೀವಿಯಲ್ಲಿ ಫಲಜ್ಯೋತಿಷ ಹೇಳುವ ಯಾವ ಗುರುಗಳು ಅಡ್ಡಿಯಿಲ್ಲ ಎಂಬ ತೀರ್ಪು, 'ಮಗಳು ಜಾನಕಿ' ಧಾರಾವಾಹಿಯಲ್ಲಿ ಮಾತ್ರ ಯಾಕೆ ಒಳ್ಳೆಯ ಜನರು ಇರುತ್ತಾರೆ ಎಂಬ ಪ್ರಶ್ನೆ... ಹೀಗೆ ಅಮ್ಮ ಮಾತಿನ ತಿಜೋರಿಯನ್ನು ತೆರೆಯುತ್ತಲೇ ಇರುತ್ತಾಳೆ. ನಾನು ಕಿವಿ ತುಂಬಿಕೊಳ್ಳುತ್ತಲೇ ಇರುತ್ತೇನೆ' ಎನ್ನುತ್ತಾನೆ ಪರಿಶ್ರಮ್. ಕೊನೆಗೆ ಅಮ್ಮ ಕೇಳುತ್ತಾಳೆ, ಯಾವಾಗ ಮದುವೆ ಆಗ್ತಿ? ಅಮ್ಮ ಈಸ್ ಟಿಪಿಕಲ್ ಅಮ್ಮ ಎನ್ನುವಾಗ ಪರಿಶ್ರಮ್ ತುಟಿಗಳಲ್ಲಿ ನಗು.

ಎಂಬಿಎ ಮುಗಿಸಿದ ಸುನೀತಾ ಅನುಭವವೇ ಬೇರೆ. ಅವಳ ಅಮ್ಮನ ಮೊಬೈಲ್ ಲಾಕ್ ಆಗಿರುವುದಿಲ್ಲ. ಹಾಗಾಗಿ ಅಮ್ಮನ ಫೇಸ್‌ಬುಕ್, ಇನ್‌ಸ್ಟಗ್ರಾಂ ಎರಡನ್ನೂ ಸುನೀತಾ ಆಗಾಗ ಇಣುಕಿ ನೋಡುತ್ತಾಳೆ. ಹಾಗೊಮ್ಮೆ ಅವಳು ಅಮ್ಮನ ಮೆಸೆಂಜರ್ ಚಾಟ್ ಓದಿಬಿಟ್ಟಿದ್ದಳು. ಅಮ್ಮನ ಪಿಯುಸಿ ಫ್ರೆಂಡ್ ಒಬ್ಬರು ಗೋವಾದಲ್ಲಿ ಇರುವುದು ಗೊತ್ತಾಗಿ ಇಬ್ಬರೂ ನಾಲ್ಕು ಸಾಲು ಬರೆದುಕೊಂಡಿದ್ದರು. ಮತ್ತೆ ಕೆಲದಿನ ಸುನೀತಾ ಅಮ್ಮನೊಡನೆ, 'ಪಿಯುಸಿ ಓದುವಾಗ ಏನೆಲ್ಲಾ ಆಯಿತು' ಅಂತ ಕೇಳುತ್ತಲೇ ಇದ್ದಳು. ಈ ತರಗತಿಯ ಓದು ಯಾವಾಗಲೂ ನೆನಪಿರುವಂತಹದು. ಮೊದಲ ನೆನಪುಗಳು ಸಾವಿರ. ಗೋವಾದ ಆ ಸ್ನೇಹಿತೆ ಲತಾಶ್ರೀಯ ಪ್ರೊಫೈಲ್ ಹುಡುಕಾಡಿ ಸುನೀತಾ ಅವರ ಮೊಬೈಲ್ ನಂಬರ್ ಸಂಪಾದಿಸಿದಳು. ಅಮ್ಮಂದಿರ ದಿನದಂದು ಬೆಳಿಗ್ಗೆ ಲತಾಶ್ರೀ ಮತ್ತು ಆಕೆಯ ಮಗ ಸುನೀತಾ ಮನೆಯ ಕಾಲಿಂಗ್ ಬೆಲ್ ಮಾಡಿದಾಗ ಅಮ್ಮನೇ ಬಾಗಿಲು ತೆರೆದಿದ್ದು. 'ಅಮ್ಮ ಹ್ಯಾಪಿ ಮದರ್ಸ್ ಡೇ... ಇವತ್ತು ಅಡುಗೆಯೇ ಬೇಡ. ಬರೀ ಮಾತು ಮಾತು ಮಾತು. ಎಲ್ಲರಿಗೂ ಊಟವನ್ನು ಝೊಮೆಟೊದಲ್ಲಿ ಆರ್ಡರ್ ಮಾಡ್ತೀನಿ' ಎಂದಾಗ ಅಮ್ಮ ನಕ್ಕಳು. 'ನಿಂಗೆ ದುಡ್ಡು ಖರ್ಚು ಮಾಡುವುದು ಹೇಗೆ ಅಂತಲೇ ಟೆನ್ಷನ್' ಅಂತ ಹುಸಿ ಬೈಗಳು. ಆದರೂ ಆಕೆ ಅದಾಗಲೇ ಹದಿಹರೆಯದ ನೆನಪುಗಳ ಹಂಚಿಕೊಳ್ಳಲು ಸಿದ್ಧಳಾಗಿದ್ದಳು.

ಅಮ್ಮಂದಿರ ದಿನವನ್ನು ವಿಭಿನ್ನವಾಗಿ ಆಚರಿಸಿದ ನೆನಪನ್ನು ಗೌರಿಯೂ ಹಂಚಿಕೊಳ್ಳುತ್ತಾಳೆ. ಅಪ್ಪನ ಅಂಗಿಗಳನ್ನು ಅಮ್ಮ ಪೇರಿಸಿ ಪೇರಿಸಿ ಒಂದುಕಡೆ ಇಟ್ಟುಕೊಂಡಿದ್ದಳು. ಅಪ್ಪನ ನೆನಪುಗಳೇ ಅವಳ ಆಸ್ತಿ. ಆ ಅಂಗಿಗಳನ್ನು ಹಾಗೆಯೇ ಇರಿಸುವುದಕ್ಕಿಂತ ಒಂದು ಕೌದಿ ಹೊಲಿದರೆ ಹೇಗೆ ಎಂಬ ಯೋಚನೆ ಬಂತು. ಹಾಗಾಗಿ ಕಳೆದ ವರ್ಷ ಅಪ್ಪನ ಶರಟುಗಳ ಕೌದಿಯೇ ಅಮ್ಮನಿಗೆ ಮದರ್ಸ್ ಡೇ ಉಡುಗೊರೆಯಾಯಿತು ಎನ್ನುತ್ತಾರೆ ಗೌರಿ.

ಈಗ ಹೇಳಿ, 'ಅಮ್ಮಂದಿರ ದಿನ'ದ ನೆಪದಲ್ಲಿ ನಿಮ್ಮ ಅಮ್ಮನಿಗೇನು ಉಡುಗೊರೆ ಕೊಡುತ್ತೀರಿ? ನನ್ನಮ್ಮನಿಗೆ ನಾನೇ ಒಂದು ದೊಡ್ಡ ಗಿಫ್ಟ್ ಎಂದು ಜಾಣ ಮಾತನಾಡಿದರೆ, ಅಮ್ಮನ ಕಣ್ಣುಗಳಲ್ಲಿ ದೀವಳಿಗೆ ಬೆಳಗು ಕಾಣುವ ಅನುಭವವನ್ನು ಮಿಸ್ ಮಾಡಿಕೊಳ್ಳುವುದು ಖಂಡಿತ.